ಹೋಗಿ ನೀರೆಲ್ಲಾ ಒಳಗೆ ಬರುತ್ತಿದೆ. ಅದನ್ನು ಸರಿಮಾಡಿಕೊಡಬೇಕು. ಆಲ್ಲಿನ ಮೂತ್ರಾಲಯವನ್ನು ೧೯೫೫ನೇ ಇಸವಿಯಲ್ಲಿ ಕಟ್ಟಿದ್ದಾರೆ. ಆಲ್ಲಿಂದ ಬಹಳ ಗಲೀಜು ಹೊರಗೆ ಬರುತ್ತಿದೆ. ಅದನ್ನು ಸ್ವಚ್ಛ ಮಾಡಲು ನಾಲ್ಕು ಹಂದಿಗಳನ್ನು ಇಟ್ಟಿದ್ದಾರೆ. ಹಂದಿಗಳೇ ಸ್ವಚ್ಛ ಮಾಡಬೇಕು. ಅದನ್ನು ಬೆಳಗಾಂ ಟೈಪ್‌ನಲ್ಲಿ ಮಾಡಿಕೊಡಿ ಎಂದು ಹೇಳುತ್ತೇನೆ. ಇದನ್ನು ಅಸೆಂಬ್ಲಿಯಲ್ಲಿ ಕೇಳುತ್ತಿರುವುದು ಒನೇ ಸಲ. ನಿಜಕ್ಕೂ ನಮಗೇ ನಾಚಿಕೆ ಬರಬೇಕು. ಎಷ್ಟೋ ವರ್ಷಗಳಾಗಿದೆ. ಆ ಮೂತ್ರಾಲಯ ಮತ್ತು ಬಸ್ ಸ್ಟ್ಯಾಂಡನ್ನು ಸುಧಾರಿಸುತ್ತೀರಾ ? ಬೆಳಗಾಂ ಪ್ರಕಾರ ಅದನ್ನು ನವೀಕರಿಸುತ್ತೀರಾ ? ಬಸ್ ಸ್ಟ್ಯಾಂಡ್‌ನಲ್ಲಿ ಕೂಡುವ ಸಲುವಾಗಿ ಫ್ಯಾಬ್ರಿಕೇಟೆಡ್ ಚೇರ್ಸ್ ಹಾಕಿ ಕೊಡಿ ಎಂದು ಕೇಳುತ್ತೇನೆ, ಬೆಂಗಳೂರಿನ ತರಹ ನಮಗೆ ಹವಾಕ್ಕೋಸ್ಕರ ಫ್ಯಾನ್ ಬೇಡ. ಕೂಡುವುದಕ್ಕೆ ಫ್ಯಾಬ್ರಿಕೇಟೆಡ್ ಚೇರ್ಸ್ ಕೊಡಿ ಎಂದು ಕೇಳುತ್ತಿದ್ದೇನೆ. ಪೆಲ್ಟರ್ ಯಾವಾಗ ಹಾಕಿಸುತ್ತೀರಿ ? ಮೂತ್ರಾಲಯವು ಯಾವಾಗ ಹೊಸದಾಗಿ ಕಟ್ಟುತ್ತೀರಿ, ಯಾವಾಗ ಬಸ್ ಸ್ಟ್ಯಾಂಡನ್ನು ಎಕ್ಸ್‌ಟೆಂಡ್ ಮಾಡಿಕೊಡುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್,—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಬೈಲಹೊಂಗಲ ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ಯಾವ ಯಾವ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಕೇಳಿದ್ದಾರೆ. ಅವರು ಬಸ್‌ಸ್ಟ್ಯಾಂಡ್ ಬಿಲ್ಡಿಂಗ್‌ನ ನವೀಕರಣದ ವಿಚಾರ ಕೇಳಿಲ್ಲ. ಅವರು ಕೇಳಿದ್ದಕ್ಕೆ ಉತ್ತರ ಸರಿಯಾಗಿ ಕೊಟ್ಟಿದ್ದೇವೆ. ಯಾವ ಯಾವ ಫೆಸಿಲಿಟಿ ಬೇಕೆಂಬ ಬಗ್ಗೆ ಈಗ ಅವರು ಹೇಳಿದ್ದಾರೆ. ಟಾಯ್ಲೆಟ್ ನವೀಕರಣ ಮಾಡಿಕೊಡುತ್ತೇವೆ ಎಂದು ಉತ್ತರ ಕೊಟ್ಟಿದ್ದೇವೆ. ಆದಷ್ಟು ಬೇಗ ಮಾಡಿಸಿಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಬೈರೇಗೌಡರ ಪ್ರಶ್ನೆ ವರ್ಗಾವಣೆ ಆಗಿದೆ.

ಶ್ರೀ ಸಿ. ಬೈರೇಗೌಡ.—ಎಲ್ಲಿಗೆ ವರ್ಗಾವಣೆ ಆಗಿದೆ ಅಧ್ಯಕ್ಷರೇ?

ಶ್ರೀ ಜೆ. ಪುಟ್ಟಸ್ವಾಮಿಗೌಡ.—ಅಗ್ರಿಕಲ್ಚರ್ ಅಂಡ್ ಆರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ವರ್ಗಾವಣೆ ಆಗಿದೆ.

ಶ್ರೀ ಸಿ. ಬೈರೇಗೌಡ.—ಈ ಅಧಿವೇಶನದಲ್ಲಿಯೇ ಇದಕ್ಕೆ ಉತ್ತರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾರಶೆಟ್ಟಿ ಹಳ್ಳಿಯನ್ನು ಸ್ಥಳಾಂತರಿಸುವ ಬಗ್ಗೆ

೭೧೮ ಶ್ರೀ ಕರಿಯಣ್ಣ (ಹೊಸಕೆಹೊನ್ನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಶೆಟ್ಟಿಹಳ್ಳಿಯು ಭದ್ರನಾಲೆಯ ವ್ಯಾಪ್ತಿಗೆ ಬರುವುದರಿಂದ ಈ ಹಳ್ಳಿಯನ್ನು ಎತ್ತರವಾದ ಸ್ಥಳಕ್ಕೆ ಸ್ಥಳಾಂತರಿಸುವ ವಿಚಾರವು ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಹಾಗದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು)—

ಅ) ಪರಿಶೀಲನೆಯಲ್ಲಿದೆ.

ಆ) ಸರ್ಕಾರದ ವತಿಯಿಂದ ರಚಿಸಲಾದ ಸಮಿತಿಯು ಸ್ಥಳ ಸಮೀಕ್ಷೆ ನಡೆಸಿದ ನಂತರ ಶಿಫಾರಸ್ಸು ಪಡೆದಿರುವುದು ಭೂಸ್ವಾಧೀನ ಪಡೆದಿರುವುದು ಮತ್ತು ಗ್ರಾಮ ಸ್ಥಳಾಂತರಿಸಲು ಅಂದಾಜನ್ನು ಸಲ್ಲಿಸಲು ನಿರ್ದೇಶಿಸಿರುವುದು.

ಶ್ರೀ ಕೆ. ಕರಿಯಣ್ಣ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಭದ್ರಾನಾಲೆಯ ಎಲ್ಲಾ ಕೆಲಸಗಳೂ ಮುಗಿದಿದ್ದು ಆ ಸ್ಕೀಮ್ ಮುಗಿದಿದೆ ಎಂದು ಹೇಳಿದ್ದಾರೆ. ಆದರೂ ಆ ಊರನ್ನು ಇನ್ನೂ ಸ್ಥಳಾಂತರ ಮಾಡಿಲ್ಲ. ಆಲ್ಲಿ ಲ್ಯಾಂಡ್ ಅಕ್ವಿಜೇಶನ್ ಸಹ ಮಾಡಿದ್ದಾರೆ. ಮನೆಗಳನ್ನು ಯಾವಾಗ ಶಿಫ್ಟ್ ಮಾಡಿ ಕೊಡುತ್ತಾರೆಂಬುದನ್ನು ಹೇಳಬೇಕು ಏಕೆಂದರೆ ಮನೆಗಳಿಗೆ ಈಗ ನೀರು ನುಗ್ಗಿ ಅವರು ಹೊರಗಡೆ ಬರುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಸರ್ಕಾರದವರು ಅವರನ್ನು ಯಾವಾಗ ಸ್ಥಳಾಂತರ ಮಾಡಿ ಕೊಡುತ್ತಾರೆ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆ ಇತಿಹಾಸ ಇರತಕ್ಕಂಥ ಒಂದು ದೊಡ್ಡ ಸಮಸ್ಯೆ. ಇದು ಸುಮಾರು ೨೮ ವರ್ಷಗಳಿಂದ ಚಾಲೂವಿನಲ್ಲಿರತಕ್ಕಂಥ ಸಮಸ್ಯೆ ಆಗಿದೆ. ಈ ಸಮಸ್ಯೆಯ ಬಗ್ಗೆ ಈಗ ನಮ್ಮ ಸರ್ಕಾರ ಅತಿ ಶೀಘ್ರವಾಗಿ ಒಂದು ನಿರ್ಧಾರವನ್ನು ತೆಗೆದುಕೊಂಡು ಈ ಸಾರಿ ಸುಮಾರು ೧೫ ಲಕ್ಷ ರೂಪಾಯಿಗಳನ್ನು ಪುನರ್‌ವಸತಿ ಕಾರ್ಯಕ್ರಮಕ್ಕಾಗಿ ಇಟ್ಟುಕೊಂಡಿದ್ದೇವೆ. ಭೂಮಿ ಕೂಡ ಅಕ್ವೈರ್ ಮಾಡಿದ್ದೇವೆ. ಅತಿ ಶೀಘ್ರದಲ್ಲಿಯೇ ಮಾಡುತ್ತೇವೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಡುಪಿ ತಾಲ್ಲೂಕಿನ ಕಟಪಾಡಿ ಹತ್ತಿರದ ಮಟ್ಟು ಅಣೆಕಟ್ಟು

೪೭೫ ಶ್ರೀ ಎ. ರುಕ್ಕಯ್ಯ ಪೂಜಾರಿ (ಪಟ್ಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಕಟಪಾಡಿ ಹತ್ತಿರದ ಮಟ್ಟು ಅಣೆಕಟ್ಟಿನಿಂದ ರೈತರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಅದನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಈ ರೀತಿ ನಷ್ಟ ಅನುಭವಿಸಿದ ರೈತರಿಗೆ ಸರ್ಕಾರವು ಪರಿಹಾರ ಧನ ನೀಡುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು)—

ಅ) ಬಂದಿದೆ.

ಆ) ಅಣೆಕಟ್ಟಿನಿಂದ ನೀರು ಸರಾಗವಾಗಿ ಹೊರಗೆ ಹೋಗಲು ಕೆಲವು ಕಡೆ ದ್ವಾರಗಳನ್ನು ತೆರೆಯುವ ಕೆಲಸವು ನಡೆಯುತ್ತಿದ್ದು ಮುಗಿಯುವ ಹಂತದಲ್ಲಿದೆ.

ಇ) ನಿಯಮಗಳ ಪ್ರಕಾರ ಪರಿಹಾರ ಧನ ಕೊಡಲು ಅವಕಾಶವಿಲ್ಲ.

ಅಡವಿಹನುಮಪ್ಪ ಏತ ನೀರಾವರಿ ಯೋಜನೆ

೮೮೧ ಶ್ರೀ ಕೆ. ಪೆಚ್. ಕುರಡಗಿ (ಮುಂಡರಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ''ಅಡವಿಹನುಮಪ್ಪ'' ಏತ ನೀರಾವರಿ ಯೋಜನೆಯ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು)—

ಅ) ಮತ್ತು ಹೌದು. ಈ ಯೋಜನೆಗೆ ತುಂಗಭದ್ರಾ ಜಲಾಶಯದಲ್ಲಿ ನೀರಿನ

ಆ) ಲಭ್ಯತೆ ಇಲ್ಲದಿರುವುದರಿಂದ ಈ ಯೋಜನೆಯನ್ನು ಕೈಬಿಡಲಾಗಿದೆ.

ಹಮ್ಮಿಗಿ ಏತ ನೀರಾವರಿ

೮೮೪ ಶ್ರೀ ಕೆ. ಪೆಚ್. ಕುರಡಗಿ (ಮುಂಡರಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ಹಮ್ಮಿಗೆ ಏತ ನೀರಾವರಿ ಯೋಜನೆಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿಯಾಗದಿರಲು ಕಾರಣಗಳೇನು?